ಕರ್ನಾಟಕದ ಪಶ್ಚಿಮ ಕರಾವಳಿಗೆ ಹೊಂದಿಕೊಂಡ ವಾಯುವ್ಯದಲ್ಲಿರುವ ಜಿಲ್ಲೆ ಉತ್ತರಕನ್ನಡ. ಈ ಜಿಲ್ಲೆಯ ಉತ್ತರ ಭಾಗದಲ್ಲಿರುವ ತಾಲ್ಲೂಕು ಜೋಯಿಡಾ. ಗೋವಾ ಹಾಗೂ ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡ ಜೋಯಿಡಾ 'ಗಡಿ ತಾಲ್ಲೂಕು' ಎಂದೇ ಪರಿಚಿತ. ಇಲ್ಲಿ ಕನ್ನಡದ ಜೊತೆಗೆ ಕೊಂಕಣಿ, ಮರಾಠಿ ಮಾತನಾಡುವ ಜನರಿದ್ದಾರೆ. ಜೋಯಿಡಾ ತಾಲ್ಲೂಕಿನ ಶೇ. 90 ಭಾಗ ಅರಣ್ಯದಿಂದ ಕೂಡಿದೆ. ಈ ತಾಲ್ಲೂಕಿನ ಮೂಲ ನಿವಾಸಿಗಳು ಕುಣಬಿಗಳು. ಬಡತನದಲ್ಲೂ ಜೀವನೋತ್ಸಾಹ ತುಂಬಿಕೊಂಡ ಶ್ರೀಮಂತ ಸಂಸ್ಕೃತಿಯ ಬುಡಕಟ್ಟು ಜನಾಂಗ ಕುಣಬಿಗಳದು.

ಜೋಯಿಡಾ ತಾಲ್ಲೂಕು ಎಂದರೆ ಅಲ್ಲಿ ಮನುಷ್ಯರು ಕಡಿಮೆ; ಮರಗಿಡಗಳು ಹೆಚ್ಚು! ತಾಲ್ಲೂಕಿನ ಪ್ರತಿ ಹಳ್ಳಿಯೂ ಭೌಗೋಳಿಕವಾಗಿ ಭಿನ್ನವಾಗಿದ್ದು, ತನ್ನದೇ ಆದ ಗುರುತನ್ನು ಉಳಿಸಿಕೊಂಡಿದೆ. ಎತ್ತರೆತ್ತರ ಮರಗಳು, ಕಡಿದಾದ ಕಣಿವೆಗಳು, ವರ್ಷದ ಆರು ತಿಂಗಳು ಮಳೆಯನ್ನು ಹೊಂದಿದ, ಮೂಲಭೂತ ಸೌಲಭ್ಯಗಳ ಕೊರತೆಯಿರುವ, ಇದುವರೆಗೂ ಗ್ರಾಮ ಪಂಚಾಯತಿಯೇ ಆಗಿರುವ ರಾಜ್ಯದ ಏಕೈಕ ತಾಲ್ಲೂಕು ಜೋಯಿಡಾ.

ಇಲ್ಲಿ ಮರಗಿಡಗಳು ಇನ್ನೂ ಉಸಿರಾಡುತ್ತಿವೆ ಎಂದರೆ ಅದಕ್ಕೆ ಕಾರಣ ಕುಣಬಿ ಬುಡಕಟ್ಟು ಸಮುದಾಯಗಳ ಬದುಕು. ಜಾತಿಭೇದವಿಲ್ಲದೆ ಅಕ್ಕರೆಯನ್ನು ನೆಚ್ಚಿಕೊಂಡು ಬದುಕುತ್ತಿರುವ ಸರಳ ಜೀವನ ಇವರದ್ದು. ಕುಣಬಿಗಳ ಪರಿಸರ ಪ್ರೀತಿ ಇಲ್ಲಿಯ ಪರಿಸರವನ್ನು ಸಮತೋಲನದಲ್ಲಿಟ್ಟಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಅವರು ರೂಢಿಸಿಕೊಂಡ ಜೀವನಶೈಲಿ ಪರಿಸರಸ್ನೇಹಿಯಾದದ್ದು. ಇವರು ಕಾಡಿನ ನಡುವೆಯೇ ಇದ್ದಾರೆ: ಆದರೆ ಕಾಡಿನ ಮರ ಕಡಿದು ತಮ್ಮ ಮನೆಗೆ ಬೇಕಾದ ಸಲಕರಣೆಗಳನ್ನು ಅವರು ಮಾಡಿಕೊಳ್ಳಲು ಬಯಸುವ ಮನಸ್ಸಿನವರಲ್ಲ. ಇಂದಿಗೂ ಕುಣಬಿ ಮನೆಗಳನ್ನು ಹೊಕ್ಕರೆ ಅಲ್ಲಿ ನಮಗೆ ಕಟ್ಟಿಗೆಯ ಸಲಕರಣೆಗಳು ಕಂಡುಬರುವುದಿಲ್ಲ. ಬದಲಾಗಿ ಸಗಣಿಯಿಂದ ಸಾರಿಸಿದ ಮಣ್ಣಿನ ಗೋಡೆ ಕಾಣುತ್ತದೆ. ದಿನನಿತ್ಯ ಕಾಡು ಪ್ರಾಣಿಗಳೊಂದಿಗೆ ವಾಸ ಮಾಡಿದರೂ ಅವುಗಳ ಪ್ರಾಣಕ್ಕೆ ಅಪಾಯ ಮಾಡುವ ಮನಸ್ಥಿತಿ ಇವರದಲ್ಲ. ಮನೆ ತುಂಬ ಆಕಳು ಎತ್ತುಗಳು ಇರುತ್ತವೆ. ಆದರೆ ತಾವು ಬಳಸಲು ಇವರು ಹಾಲನ್ನು ಕರೆಯುವುದಿಲ್ಲ. ದನಗಳ ಹಾಲು ದನದ ಕರುವಿಗೆ ಮೀಸಲು. ಕರುವಿನ ಹೊಟ್ಟೆ ಹೊಡೆದು ನಾವು ಹಾಲು ಕರೆಯಬಾರದು ಎಂಬುದು ಇವರು ರೂಢಿಸಿಕೊಂಡು ಬಂದ ಪದ್ಧತಿ. ದನಕರುಗಳನ್ನು ಮಾರಾಟ ಮಾಡುವ ಯೋಚನೆಯನ್ನು ಇಂದಿನವರೆಗೂ ಈ ಜನ ಮಾಡಿಲ್ಲ.

ಕುಣಬಿಗಳು ಪ್ರಾಣಿಗಳಿಗೆ ಬಹಳ ಗೌರವದ ಸ್ಥಾನ ನೀಡುತ್ತಾರೆ. ಮನೆಯಲ್ಲಿ ಸಾಕಿದ ನಾಯಿಯೂ ಹೊರಗೆ ಮಲಗಲಾರದು. ತಮ್ಮೊಂದಿಗೆ ಕೋಣೆಯ ಒಂದು ಮೂಲೆಗೆ ನಾಯಿ ಮಲಗಲು ಜಾಗ ಮಾಡಿಕೊಡುವ ಮನಸು ಕುಣಬಿಗಳದ್ದು. ಇವರ ದನಕರುಗಳನ್ನು ಮೇಯಿಸಲು ಮನೆಯ ಒಬ್ಬ ಸದಸ್ಯ ಇದ್ದೇ ಇರುತ್ತಾನೆ. ದನಕರುಗಳನ್ನು ತಮ್ಮ ನಿಗಾ ಇಲ್ಲದೆ ಮೇಯಿಸಲು ಬಿಡಲಾರರು ಇವರು. ಒಂದು ಸಂಪ್ರದಾಯದಂತೆ ಇದು ನಡೆದುಬಂದಿದೆ. ಕುಣಬಿಗಳಿಗೆ ಸಾಕು ಪ್ರಾಣಿಗಳೆಂದರೆ ಮನುಷ್ಯನಷ್ಟೇ ಗೌರವ. ಕಾಡಿನ ಸೊಪ್ಪು ಸದೆ ಕೊಯ್ದು ಗೊಬ್ಬರ ತಯಾರಿಸುವ, ಗೊಬ್ಬರ ಮಾಡಿ ಮಾರುವ ವಹಿವಾಟಿಗೆ ಇವರು ಹೋಗಲಾರರು. 'ಪ್ರತಿ ಮರದ ಎಲೆಯೂ ಆಯಾ ಮರದ ಕೆಳಗೆ ಬಿದ್ದಿರಬೇಕು, ಅದು ಆ ಮರಕ್ಕೆ ಗೊಬ್ಬರವಾಗುತ್ತದೆ. ನಾವು ತರಗೆಲೆಗಳನ್ನೆಲ್ಲ ಮರದ ಬುಡದಿಂದ ತಂದರೆ ಅದರ ಜೊತೆ ಮಣ್ಣು ಸಡಿಲಗೊಂಡು ಮರದ ಬೇರುಗಳಿಗೆ ಹಾನಿಯಾಗುತ್ತದೆ?' ಎಂದು ತಮ್ಮದೇ ಮಾತಿನಲ್ಲಿ ಹೇಳುವ ಮಹಾದೇವ ವೇಳಿಪ ಅವರಂಥಹ ಹಿರಿಯರ ಮಾತು ಕೇಳಿದಾಗ ಅವರ ವೃಕ್ಷಪ್ರೀತಿಯ ಅನನ್ಯತೆ ಎದ್ದು ತೋರುತ್ತದೆ. ಎಲೆಮರೆಯ ಕಾಯಿಯಂತೆ ಇದ್ದ ವೇಳಿಪ ಅವರನ್ನು ಗಮನಿಸಿ ರಾಜ್ಯ ಸರ್ಕಾರ ಈ ಬಾರಿ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ಕುಣಬಿ ಬುಡಕಟ್ಟು ಸಮುದಾಯಕ್ಕೆ ಹಾಗೂ ಜೋಯಿಡಾ ತಾಲ್ಲೂಕಿಗೆ ಸಿಕ್ಕ ಮೊದಲ ರಾಜ್ಯೋತ್ಸವ ಪ್ರಶಸ್ತಿ ಇದು.

## ನಡೆದಾಡುವ ವಿಶ್ವಕೋಶ

ಜೋಯಿಡಾದಿಂದ 15 ಕಿ.ಮೀ. ದೂರ ಕಾರ್ಟೋಳಿ ಎಂಬ ಸುಂದರ ಹಳ್ಳಿಯಿದೆ. ಕಡಿದಾದ ಕಣಿವೆ, ಅಲ್ಲಲ್ಲೇ ಎದ್ದು ಕುಳಿತ ಹಸಿರಾದ ಬಾರೀಕು ಗದ್ದೆಗಳು, ಆಗಾಗ ಹಗಲಲ್ಲೇ ಕರಡಿ ಕಾಣಿಸುವ ವಾತಾವರಣ. ಇಂತಹ ಕಾಡಿನ ಹಳ್ಳಿಯಲ್ಲಿ ಹುಟ್ಟಿದ ಕುಣಬಿ ಜನಾಂಗದ ಅಪ್ಪಟ ಪ್ರತಿಭೆ ಮಹಾದೇವ ಬುಧೋ ವೇಳಿಪರವರು. ಕುಣಬಿಗಳ ನಡೆದಾಡುವ ವಿಶ್ವಕೋಶ ಎಂದು ಹೆಸರಾದವರು. ಸರಳತೆ, ಮುಗ್ಧತೆಯನ್ನು ಹೊಂದಿರುವ ಇವರು, ತಮ್ಮ ಅನ್ನವನ್ನು ತಾವೇ ಬೆಳೆದು ಹಂಚಿಕೊಂಡು ತಿನ್ನುವ ಶ್ರಮಸಂಸ್ಕೃತಿಯ ಪ್ರತೀಕದಂತೆ ತೋರುತ್ತಾರೆ.

ತಲೆಗೊಂದು ಮುಂಡಾಸು, ಕಚ್ಚೆ ಪಂಚೆ, ಕೈಯಲ್ಲಿ ಒಂದು ಕೋಲು ಹಿಡಿದು ಶರ್ಟ್ ತೊಟ್ಟರೆಂದರೆ ತೊಂಬತ್ತೆರಡರ ವಯಸ್ಸಿನಲ್ಲಿನಲ್ಲಿಯೂ ಪರಿಸರ ಸಂಬಂಧಿ ಹೋರಾಟಕ್ಕೆ ಎದ್ದು ನಿಂತು ಬಿಡುತ್ತಾರೆ. ಬುಡಕಟ್ಟು ಜನರ ಬಾಯಲ್ಲಿ 'ಮಾದೇವ್ ದಾದಾ' ಎಂದರೆ ಗಿಡಮರ ಪೂಜಿಸುವ ಪ್ರಕೃತಿ ಆರಾಧಕ.

ಅಗತ್ಯವಿರುವಷ್ಟನ್ನೇ ಬೆಳೆದು ಉಣ್ಣುವ, ಬಡತನದ ನಡುವೆಯೂ ಸರಳವಾಗಿ ಬದುಕುತ್ತಿರುವ, ಕುಣಬಿ ಜನಾಂಗದ ಯುವ ಪೀಳಿಗೆಗೆ ಮರಗಿಡಗಳ ಬಗ್ಗೆ, ಪಕ್ಷಿಗಳ ಬಗ್ಗೆ ಮಾಹಿತಿ ನೀಡುವ ಹಿರಿಯಜೀವ ಮಹಾದೇವ ವೇಳಿಪರು. ಜೋಯಿಡಾದ ಜೀವ ನದಿ ಕಾಳಿ, ತನ್ನೊಡಲಲ್ಲಿ ಅಪಾರ ಜೀವ ಜಂತುಗಳನ್ನು ಪೊರೆದಿದೆ. ಈ ಕಾಳಿ ನದಿಯನ್ನು ಕುಣಬಿಗಳು ಪೂಜಿಸುತ್ತಾರೆ. ಇಂದು


ಮಹಾದೇವ ವೇಳಿಪ ಅವರ ಜೊತೆ
ಹಾಡುವ ಜಾನಪದ ಕಲಾವಿದರು